ನೇಮಕಾತಿಗೆ 'ಇನ್ಸಿ' ವಿಳಂಬ: ಪರಿಶೀಲನೆಗೆ ಕೇಂದ್ರ ಸೂಚನೆ

• ಸೋನಲ್ ಚೌಧರಿ

ಬೆಂಗಳೂರು: ಐಟಿ. ಸೇವಾ ಕಂಪನಿ ಇನ್ಫೊಸಿಸ್ 'ಐಟಿ. ಪದವೀಧರರನ್ನು ಕೊಡಬೇಗೆ ಗುರಿಪಡಿಸಿದೆ' ಎಂಬ ಆರೋಪದ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ಕಾರ್ಮಿಕ ಸಚಿವಾಲಯವು ರಾಜ್ಯದ ಕಾರ್ಮಿಕ ಇಲಾಖೆಗೆ ಸೂಚನೆ ನೀಡಿದೆ.

ಸ್ಟಾರ್ಟ್ ಎಂಪ್ಲಾಯೀಸ್ ಮತ್ತು ಡಿಪಿಐಐಟಿ ಸ್ಟೆಪಲೈಸ್ಡ್ ಎಂಪ್ಲಾಯಿಮೆಂಟ್ ಇನ್ಸೆಂಟಿವ್ (ಎಸ್ಇಎಸ್ಐ) ಹುದ್ದೆಗಳಿಗೆ (ಒಟ್ಟು 2,500 ಮಂದಿಗೆ) ನೇಮಕ ಮಾಡಿಕೊಳ್ಳುವುದಾಗಿ ಕಂಪನಿಯು 2022ರಲ್ಲಿಯೇ ಹೇಳಿದ್ದರೂ, ನೇಮಕಾತಿ ಆಗಿಲ್ ಎಂಬ ಆರೋಪಕ್ಕೆ ಇದು ಸಂಬಂಧಿಸಿದೆ.

ಐಟಿ. ಉದ್ಯೋಗಿಗಳ ಸಂಘಟನೆಯಾದ ಎನ್ಎಐಟಿಯುಸಿಗೆ ಅಧ್ಯಕ್ಷ ಹರಪ್ರೀತ್ ಸಿಂಗ್ ಸಲುಜಾ ಅವರು ಸಲ್ಲಿಸಿದ ದೂರಿಗೆ ಪ್ರತಿಯಾಗಿ ಕೇಂದ್ರವು, ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ರಾಜ್ಯಕ್ಕೆ ಸೆಪ್ಟೆಂಬರ್ 3ರಂದು ಬರೆದ ಪತ್ರದಲ್ಲಿ ಹೇಳಿದೆ.

ಎನ್ಎಐಟಿಯುಸಿ ಸಂಘಟನೆಯು ಜೂನ್ ತಿಂಗಳಿನಲ್ಲಿ ಹಾಗೂ ಆಗಸ್ಟ್‌ನಲ್ಲಿ ಕೇಂದ್ರದ ಮಧ್ಯಪ್ರದೇಶಕ್ಕೆ ಕೋರಿಕೆ ಸಲ್ಲಿಸಿತ್ತು. ಇದಾದ ನಂತರದಲ್ಲಿ ಇನ್ಫೊಸಿಸ್ ಕಂಪನಿಯು, ಸರಿಸುಮಾರು ಎರಡು ಸಾವಿರ ಮಂದಿಗೆ ಈ ವರ್ಷದ ಅಕ್ಟೋಬರ್‌ನಲ್ಲಿ ಕೆಲಸಕ್ಕೆ ಸೇರುವಂತೆ ಪತ್ರ ರವಾನಿಸಿದೆ.

ಆದರೆ, ಸರಿಸುಮಾರು 500 ಮಂದಿಗೆ ಕೆಲಸಕ್ಕೆ ಸೇರಿಕೊಳ್ಳುವ ದಿನಾಂಕ ಯಾವುದು ಎಂಬುದು ಕಂಪನಿಯ ಕಡೆಯಿಂದ ಇನ್ನೂ ಖಚಿತವಾಗಿಲ್ಲ. ಈ ವಿಚಾರವಾಗಿ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಲು ಇನ್ಫೊಸಿಸ್ ನಿರಾಕರಿಸಿದೆ.

2024 NEW
COLLECTION AT
hakoba
SINCE 1960
Embroidery beyond your imagination
SALE upto 50% OFF
BIG DISCOUNT SALE
GET THE BEST OF EMBROIDERED FABRICS ON SWISS COTTON, MUL MUL, ORGANDI, VOILES, KOTA AND MUCH MORE
ONLY AT
Lady Jahangir Kotari Hall
14, Queens Road, Circle, Shivaji Nagar, Near Indian Express, Bangalore - 560001.
10.30 a.m. to 8.30 p.m. All Cards Accepted
Last Date: 8th SEP. 2024

ಭಾರತೀಯ ನಾರು ನಿಗಮ ನಿಯಮಿತ
(ಭಾರತ ಸರ್ಕಾರದ ಅಧೀನ)
ಜಟಾಯೂ ಭವನ, ಶೆಡ್ 4 ಮತ್ತು 4ಎಇ ಮಹಡಿ,
ಸಿಎಫ್ ಬ್ಲಾಕ್, ಆಕ್ಟರ್ ಸಿಟಿಯಾನ್-1, ಕೋಲ್ಕತಾ, ಪಶ್ಚಿಮ ಬಂಗಾಳ - 700156
ಫೋನ್: 033-2253-1100, ಫ್ಯಾಕ್ಸ್: 033-2252-1771
ಜಿಇಎಂ: U17232WB1971GOI027958
ನಾನ್-ಎಕ್ಸಿಕ್ಯೂಟಿವ್ (ರೆಗ್ಯೂಲರ್) ಹೊಸ ನೇಮಕಾತಿ ಮತ್ತು ವಿಶೇಷ ನೇಮಕಾತಿ ಡ್ರೈವ್ (ಎಸ್ಆರ್‌ಡಿ) -1ನೇ ಪ್ರಯತ್ನ
ಕೆಳಕಂಡ ಹುದ್ದೆಗಳಿಗೆ ಆರ್ಹ ಅಭ್ಯಾಸಿಸಲಾಗಿದೆ
ಅಕೌಂಟೆಂಟ್: 23 ಹುದ್ದೆಗಳು (ಎಸ್‌ಸಿ-4, ಎಸ್‌ಟಿ-2, ಒಬಿಸಿ-ಎನ್‌ಸಿಎಲ್-5, ಇಡಬ್ಲ್ಯೂಎಸ್-2, ಯುಆರ್-10)
ಜೂನಿಯರ್ ಆಫೀಸರ್: 25 ಹುದ್ದೆಗಳು (ಎಸ್‌ಸಿ-4, ಎಸ್‌ಟಿ-2, ಒಬಿಸಿ-ಎನ್‌ಸಿಎಲ್-6, ಇಡಬ್ಲ್ಯೂಎಸ್-2, ಯುಆರ್-11)
ಜೂನಿಯರ್ ಅನಲಿಸ್ಟ್: 42 ಹುದ್ದೆಗಳು (ಎಸ್‌ಸಿ-7, ಎಸ್‌ಟಿ-4, ಒಬಿಸಿ-ಎನ್‌ಸಿಎಲ್-10, ಇಡಬ್ಲ್ಯೂಎಸ್-4, ಯುಆರ್-17)
ವಿವರವಾದ ಅಧಿಸೂಚನೆಗಾಗಿ, ದಯವಿಟ್ಟು ಸಂದರ್ಶಿಸಿ www.lutecorp.in
ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 27-ಸೆಪ್ಟೆಂಬರ್-2024
CBC 41122/12/0013/2425

PUBLIC NOTICE
My Client Smt. Prema,V W/O Raghavendra V, Age 41 years, R/at No.29, 1st Floor, Uma Enclave, 5th Main, Sarvabhouma Nagar, Chikkabasandra, Bengaluru -560061, my client has lost the original registered sale deed dated 31-3-2004 registered as document No.ANG(U)-BNG(S) 27566- 2003-2004, of Book-1, at the office of Sub Registrar, Bangalore South Taluk, Bangalore in respect of the property bearing No.30, Khatha NO.10, Situated at Begur Village, Begur Hobli, Bangalore South Taluk, Bengaluru, measuring east to west 30 feet and north to south 40 feet within the limit of the Bruhat Bangalore Mahanagara Palika, Further my client has lodge a complaint for the loss of the aforesaid document under section 155 of CrPC, vide Sonal/Ulsr/21/2020, dated 27-8-2024, Police Unit Bengaluru City, By this notice the public in general are hereby informed to kindly return the same if found under signed address.
(AFZAL KHAN) Advocate
No.120/12, 2nd Floor, New M M Complex, Chikka bazaar road, Tasker Town, Bangalore-560 051 Mob.No.8845615630

ಅಂಗಾಂಗ ಕಸಿಗೆ ಕಾಯುತ್ತಿರುವವರ ಸಂಖ್ಯೆ ಏರಿಕೆ • ನಗರದ ಖಾಸಗಿ ಆಸ್ಪತ್ರೆಗಳ ವೈದ್ಯರಿಂದ ಕುಟುಂಬಸ್ಥರಿಗೆ ಮನವರಿಕೆ

ಅಂಗಾಂಗ ದಾನ: 'ಖಾಸಗಿ' ಮನವಿಗೆ ಸ್ಪಂದನ

• ವರುಣ ಹೆಗಡೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ಕುಟುಂಬಸ್ಥರಿಗೆ ಮನವರಿಕೆ ಮಾಡಿಸುವಲ್ಲಿ ನಗರದ ಖಾಸಗಿ ಆಸ್ಪತ್ರೆಗಳು ಯಶಸ್ವಿಯಾಗುತ್ತಿದ್ದು, ಈ ವರ್ಷ ರಾಜ್ಯದಲ್ಲಿ ಅಂಗಾಂಗ ದಾನ ಮಾಡಿದ 105 ಮಂದಿಯಲ್ಲಿ 77 ಮಂದಿಯ ಅಂಗಾಂಗಗಳನ್ನು ನಗರದ ಖಾಸಗಿ ಆಸ್ಪತ್ರೆಗಳಲ್ಲಿಯೇ ಸಂಗ್ರಹಿಸಲಾಗಿದೆ.

ಅರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಗ ಕಸಿ ಸಂಸ್ಥೆಯ (ಸೊಟೊ) ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ನೆರವಾಗುತ್ತಿದೆ. ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗಗಳನ್ನು ದಾನವಾಗಿ ಪಡೆದು, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಕಸಿ ಮಾಡಲಾಗುತ್ತಿದೆ. ದಾನಿಗಳ ಕೊರತೆಯಿಂದ ರಾಜ್ಯದಲ್ಲಿ ಎಂಟು ಸಾವಿರಕ್ಕೂ ಅಧಿಕ ಮಂದಿ ಅಂಗಾಂಗಗಳಿಗಾಗಿ ಎದುರು ನೋಡುತ್ತಿದ್ದಾರೆ.

ವರ್ಷವಾರು ಅಂಗಾಂಗ ದಾನ	ವರ್ಷ	2020	2021	2022	2023	2024
	ದಾನಿಗಳು	35	70	151	178	105



ಅಂಗಾಂಗ ದಾನದ ಬಗ್ಗೆ ಆರೋಗ್ಯ ಇಲಾಖೆಯು ಜಾಗೃತಿ ಮೂಡಿಸುತ್ತಿದ್ದರೂ ಜನರಲ್ಲಿನ ಆರಿವಿನ ಕೊರತೆಯಿಂದಾಗಿ ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಮಯಕ್ಕೆ ಸರಿಯಾಗಿ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲಿನ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಲಾದ ಅಂಗಾಂಗಗಳನ್ನು 'ಸೊಟೊ' ಅಡಿ ಹೆಸರು ನೋಂದಾಯಿಸಿ ಕೊಡಬೆಕೆಗೆ ಕಸಿ ಮಾಡಿಸಿತ್ತಿದ್ದಾರೆ.

ಹಲವರಿಗೆ ನೆರವು: ಈ ಮೊದಲು ಜೀವಾಶ್ರಯಕ್ಕೆ ಹೆಸರಿನಿಂದ ನೋಂದಾಯಿಸಲಾಗಿದ್ದ 'ಸೊಟೊ' ಪ್ರಕಾರ, ಈ ವರ್ಷ ಇಲ್ಲಿನ ಆಸ್ಪತ್ರೆ ಆರೈಕೆ ಆಸ್ಪತ್ರೆಯಲ್ಲಿ ಗರಿಷ್ಠ (24) ಮಂದಿಯಿಂದ ಅಂಗಾಂಗಗಳನ್ನು ಸಂಗ್ರಹಿಸಲಾಗಿದೆ. ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ 11 ಮಂದಿ, ಸ್ಪರ್ಶ ಆಸ್ಪತ್ರೆಯಲ್ಲಿ 10 ಮಂದಿ, ನಾರಾಯಣ ಹೃದಯಾಲಯದಲ್ಲಿ ಐದು, ಕಾವೇರಿ ಆಸ್ಪತ್ರೆಯಲ್ಲಿ ನಾಲ್ವರಿಂದ ಅಂಗಾಂಗಗಳನ್ನು ಪಡೆಯಲಾಗಿದೆ. ಬ್ಯಾಪ್ಟಿಸ್ಟ್, ಮಣಿಪಾಲ್ ಸೇರಿ ನಗರದ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿಯೂ ದಾನಿಗಳಿಂದ ಅಂಗಾಂಗ ಸಂಗ್ರಹಿಸಿ, ಅಗತ್ಯವಿದ್ದವರಿಗೆ ಒಳಗಾದವರಿಗೆ ಕಸಿ ಮಾಡಲಾಗಿದೆ. ಒಟ್ಟು 105 ದಾನಿಗಳಿಂದ 301 ಅಂಗಾಂಗ ಹಾಗೂ 526 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ.

'ವೃದ್ಧಿಯಾ ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗಗಳನ್ನು ದಾನವಾಗಿ ಪಡೆಯಲಾಗುತ್ತಿದೆ.ದಾನಿಗಳಿಕೊಡಿಯಿಂದಾಗಿಅಂಗಾಂಕಸಿಗೆ ಕಾಯುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಕುಟುಂಬಸ್ಥರಿಗೆ ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಸಲಾಗುತ್ತಿದೆ' ಎಂದು ಸ್ಪರ್ಶ ಆಸ್ಪತ್ರೆಯ ಕಸಿ ಸಲಹಾಗಾರ ಡಾ. ಗೌತಮ್ ಕುಮಾರ್ ತಿಳಿಸಿದರು.

ಮೂತ್ರಪಿಂಡಕ್ಕೆ ಹೆಚ್ಚಿನ ಬೇಡಿಕೆ

'ಸೊಟೊ' ಸಂಸ್ಥೆಯಿಂದ ಅಂಗಾಂಗಕ್ಕಾಗಿ ನೋಂದಾಯಿಸಿಕೊಳ್ಳಲಾದ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಸಂಸ್ಥೆಯಿಂದ ಕೊಟ್ಟಿರುವ ಪ್ರಕಾರ ಈ ವರ್ಷ 5,945 ಮಂದಿ ನೋಂದಾಯಿಸಿಕೊಂಡು, ಕಾಯುತ್ತಿದ್ದಾರೆ. ಯಕೃತ್ತಿಗಾಗಿ 2,198, ಹೃದಯಕ್ಕಾಗಿ 190, ಶ್ವಾಸಕೋಶಕ್ಕಾಗಿ 79 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಒಟ್ಟಾಗಿ ಅಂಗಾಂಗ ಸಂಸ್ಥೆಯ ಅಂಗಾಂಗಗಳನ್ನು ಒಡಗಿಸುತ್ತಿದೆ.

₹8,800 ಕೋಟಿ ಸಿಎಸ್‌ಆರ್ ನಿಧಿ ಶಿಕ್ಷಣಕ್ಕೆ ಮೀಸಲು: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬರುವ ₹8,800 ಕೋಟಿ ಸಿಎಸ್‌ಆರ್ ನಿಧಿಯನ್ನು ಮುಂದಿನ 3-4 ವರ್ಷಗಳ ಕಾಲ ಶಾಲೆಗಳ ನಿರ್ಮಾಣ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡುವಂತೆ ಮನವಿ ಮಾಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ 'ಭಾರತ ಜೋಡೊ' ಭವನದಲ್ಲಿ ಗುರುವಾರ ನಡೆದ ಶಿಕ್ಷಕರ ದಿನ ಸಾಗರ ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಈ ಹಣ ವಿನಿಯೋಗಿಸುವ ಉದ್ದೇಶಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ' ಎಂದರು.

'ರಾಜಕಾರಣಿಗಳನ್ನು ಜನರು ಬೇಗ ಮರೆಯುತ್ತಾರೆ. ಆದರೆ, ತಮ್ಮ ಗುರುಗಳನ್ನು ಬೇಗ ಮರೆಯುವುದಿಲ್ಲ. ನಾವು ನಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಮರೆಯುವುದಿಲ್ಲ. ಶಿಕ್ಷಕರ ಮೇಲೆ ವಿಶೇಷ ನಂಬಿಕೆ ವಿಶ್ವಾಸ ಇರುತ್ತದೆ. ಮಕ್ಕಳು ಮನವಿಯಂತೆ ತಂದೆ ತಾಯಿ ಮಾತು ಕೇಳದಿದ್ದರೂ ಶಿಕ್ಷಕರು ಹೇಳಿದ್ದನ್ನು ಕೇಳುತ್ತಾರೆ' ಎಂದರು.

ಸಾಧಕ ಶಿಕ್ಷಕರಿಗೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಎಂ.ವಿ. ರಾಜೀವ್ ಗೌಡ ಇದ್ದರು.

ಕೆಪಿಸಿಸಿ ಕಚೇರಿಯ 'ಭಾರತ ಜೋಡೊ ಭವನ'ದಲ್ಲಿ ಗುರುವಾರ ನಡೆದ ಶಿಕ್ಷಕರ ದಿನ ಮತ್ತು ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿದರು

ಪಿಒಪಿ ಮೂರ್ತಿ ಬಳಕೆ ನಿಷೇಧಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಮಾಲಿನ್ಯ ತಡೆಯುವ ಹೆಸರಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶನ ಮೂರ್ತಿಗಳ ಬಳಕೆ ನಿಬಂಧಿಸಿರುವ ಸರ್ಕಾರದ ನಡೆ ಖಂಡನೀಯ ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಹಾನಗರದ ಸಮಿತಿ ಅಧ್ಯಕ್ಷ ಈ. ಅಶ್ವತ್ಥನಾರಾಯಣ, 'ಧಾರ್ಮಿಕ ಆಚರಣೆ, ಸಂಪ್ರದಾಯ ಮತ್ತು ಪ್ರಾಣಿಗಳ ಇಷ್ಟವಾದ ಮೂತ್ರಿಯನ್ನು ಪೂಜೆಯಾದ ಹಕ್ಕು ಪ್ರತಿಯೊಬ್ಬ ಭಕ್ತರಿಗೆ ಇದೆ. ಪರಿಸರಕ್ಕೂ ಹಾನಿಯಾದರೆ, ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವಂತಹ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು' ಎಂದು ಆಗ್ರಹಿಸಿದರು.

'ಆತ್ಮಿಚಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ತನ್ನ ಆದೇಶದಲ್ಲಿ ಪಿಒಪಿ ಮೂರ್ತಿ, ವಿಗ್ರಹದ ಎತ್ತರ, ಧಾರ್ಮಿಕ ಆಚರಣೆಯ ಬಗ್ಗೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಸಾರ್ವಜನಿಕ ಗಣೇಶೋತ್ಸವ ಆಚರಣೆಯ ಅಡ್ಡಪಡಿಸಲಾಗಿದೆ. ಮಂಡಳಿಯ ಈ ಧೋರಣೆಯಿಂದ ನಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗುತ್ತಿದೆ' ಎಂದು ಆರೋಪಿಸಿದರು.

'ಪಿಒಪಿ ಮೂರ್ತಿಗಳನ್ನು ಅಲಂಕಾರಕ್ಕೆ ಮಾತ್ರ ಬಳಸಿ, ಮುಂದಿನ ವರ್ಷವೂ ಇದೇ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಬೇಕು. ಆಚರಣೆಯ ಸಮಿತಿಗಳಿಗೆ ಪಿಒಪಿ ಮೂರ್ತಿಗಳ ಪಕ್ಕದಲ್ಲಿ ಮಣ್ಣಿನ ಗಣೇಶ ವಿಗ್ರಹಗಳನ್ನು ಇರಿಸಿ, ಪೂಜೆಯಿಂದ ವಿಸರ್ಜನೆ ಮಾಡುವಂತೆ ಸೂಚಿಸಬೇಕು. ಪಿಒಪಿ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಯಾವುದೇ ಅಡಚಣೆ ಯಾಗದಂತೆ ನಿರ್ದೇಶನೆಯೂ' ಎಂದು ಒತ್ತಾಯಿಸಿದರು.

'ಉತ್ತರ ಮೂರ್ತಿ ದಿಬುವ ಕೆರೆ, ಕಲ್ಯಾಣಿ ಸ್ಥಳಗಳಿಗೆ ಅನ್ಯ ಸೌಲಭ್ಯ ಕಲ್ಪಿಸಬೇಕು. ಅನೇಕ ವರ್ಷಗಳಿಂದ ಹೊರಹಾಕಿದ ಗಣೇಶೋತ್ಸವ ಕೂಡಲೇ ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

ಗಣೇಶ ಮೂರ್ತಿ ವಿಸರ್ಜನೆಗೆ 462 ಮೊಬೈಲ್ ಟ್ಯಾಂಕ್



ಬೆಂಗಳೂರು: ಗಣೇಶ ಮೂರ್ತಿ ವಿಸರ್ಜನೆಗಾಗಿ ಸಂಚಾರ ವಾಹನ (ಮೊಬೈಲ್ ಟ್ಯಾಂಕ್) ಹಾಗೂ ಕೆರೆಗಳಲ್ಲಿ ಲಭ್ಯವಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

41 ಕೆರೆ ಅಂಗಳದಲ್ಲಿ ಶಾಶ್ವತ/ ತಾತ್ಕಾಲಿಕ ಕಲ್ಯಾಣಿಗಳು, 462 ತಾತ್ಕಾಲಿಕ ಮೊಬೈಲ್ ಟ್ಯಾಂಕ್‌ಗಳ ವ್ಯವಸ್ಥೆಯನ್ನು ವಾರ್ಡ್‌ಗಳಲ್ಲಿ ಮಾಡಲಾಗಿದೆ. ಗಣೇಶ ಮೂರ್ತಿ ಪ್ರತಿಷ್ಠಾಪನೆಗಾಗಿ ಅನುಮತಿ ಪಡೆಯಲು 63 ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿದೆ.

ಗಣೇಶ ಮೂರ್ತಿ ವಿಸರ್ಜನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಹೆಚ್ಚಿನ ಮಾಹಿತಿಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅದರ ಸಂಪೂರ್ಣ ವಿವರಗಳನ್ನು ಪಾಲಿಕೆ ಮೆಸ್ಸೆಜ್ https://apps.bbmpgov.in/ganesh2024/ ನಲ್ಲಿ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಂಸ ಮಾರಾಟ ನಿಷೇಧ: ಗಣೇಶ ಚತುರ್ಥಿಯಂದು ಶನಿವಾರ (ಸೆಪ್ಟೆಂಬರ್ 7) ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಬಾಲಕಿಯ ಮೇಲೆ ಅತ್ಯಾಚಾರ: 30 ವರ್ಷ ಜೈಲು ಶಿಕ್ಷೆ

ಮೈಸೂರು: ಐದು ವರ್ಷದ ಬಾಲಕಿಯನ್ನು ಮನೆಗೆ ಕರೆದು, ಅತ್ಯಾಚಾರ ಎಸಗಿದ್ದ ಆರೋಪಿ ತಿ.ನರಸೀಪುರ ತಾಲ್ಲೂಕಿನ ಮಲಿಯೂರು ಗ್ರಾಮದ ಸುರೇಶ್‌ಗೆ ಪೋಕ್ಸೋ ವಿಶೇಷ ನ್ಯಾಯಾಲಯವು 30 ವರ್ಷ ಜೈಲು ಶಿಕ್ಷೆ, ₹1 ಲಕ್ಷ ದಂಡ ವಿಧಿಸಿದೆ. 2023ರ ಬಲ್ಲೆ 15ರಂದು ಬಾಲಕಿಯ ಪೋಷಕರಿಲ್ಲದ ವೇಳೆ ಘಟನೆ ನಡೆದಿತ್ತು, ನಂತರ ಆಕೆ ನೀಡಿದ ಮಾಹಿತಿ ಮೇರೆಗೆ ತಾಯಿ ಬನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಟಿ.ಎಸ್.ಲೋಕಾಕ್ಷಿ ಅವರು ತನಿಖೆ ನಡೆಸಿ ದೋಷಾರೋಪಣಾಪತ್ರ ಸಲ್ಲಿಸಿದ್ದರು.

ದಯಾನಂದ, ಸುತೀರ್‌ಗೆ ಕನಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ದಯಾನಂದ ಮೂರ್ತಿ ಎ.ಎನ್.ತೀರ್ಥ ಕುಮಾರ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕನಾಪ) ಸ್ಪಿಪ್ಪಂಗಿಗೆ ನೀಡುವ 'ದೀಪಕ್ಕೆ ಎ.ಸೆ.ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿಗೆ ದಯಾನಂದ ಮೂರ್ತಿ, 'ತ್ರಿಮಾತಿ ವಿ.ಗೀರಮ್ಮ ಗಂಗಾಧರಯ್ಯ ಮತ್ತಳ ಸ್ಪಿಪ್ಪಂಗಿ ಸೇವಾ ಪ್ರಶಸ್ತಿಗೆ ಎ.ಎನ್.ತೀರ್ಥ ಕುಮಾರ್ ಆಯ್ಕೆಯಾಗಿದ್ದಾರೆ.

ಎಸ್.ರಮಾದೇವಿ ವಿಶ್ವೇಶ್ವರಯ್ಯ ಹಾಗೂ ಎ.ಜಿ.ನಾಗರಾಜ್ ಅವರು ಈ ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಿದ್ದಾರೆ. ಕನಿಷ್ಠ 10 ವರ್ಷಗಳು ಪರಿಪಾಕ್ಕಿನಲ್ಲಿ ಸೇವೆ ಸಲ್ಲಿಸ